ಮೈಸೂರ ಗೆಜೆಟ್.

ಸಂ. XXXI.] ಸರಕಾರದಿಂದ ಫಾಯಿಷ್ ಆದ್ದು [ನಂ. 1.

ಬೆಂಗಳೂರು, ಗುರುವಾರ, ಜನವರಿ ತಾ|| 9 ಸ್ 1896

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ಪ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ರು, ರಜಿಸ್ಟ್ರೇರ್ಸ್ ವ ಯುಡ್ಯುಕೇರ್ಸ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ಸ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಯತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಯನ್‌ಗಳು.—ಇಲ್ಲ.

4ನೇ ಭಾಗ—ಸರ್ಕಾರಿ ಕಾಗದ್ ಪತ್ರಗಳು.—ಇಲ್ಲ.

ಭಾಗಗಳನ್ನು ಪ್ರತ್ಯೇಕ ನೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ರೆವಿನ್ಯೂ.

ತಾರೀಖು 9ನೇ ಡಿಸೆಂಬರ್ 1895.

ನಂ. 5300.—ರೆ. 2057.—1888ನೇ ಇಸವಿ IVನೇ ರಗ್ಯುಲೇಷ್ಯನ ಆದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನ್ 2ನೇ ಪ್ಯಾರಾ ಅನುಸರಿಸಿ, ಮೈಸೂರು ಸರ್ಕಾರದವರು, ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳು ಮದ್ದಗಿರಿ ತಾಲ್ಲೂಕು ದೊಡ್ಡೇರಿ ಹೋಬಳಿಗೆ ಕೇರಿದ ಸರ್ವಮಾನ್ಯ ಗೊಲ್ಲಹಳ್ಳಿ ಗ್ರಾಮಕ್ಕೆ ಲಾಗು ಮಾಡಲ್ಪಡತಕ್ಕದ್ದೆಂದು ಆಜ್ಞಾಪಿಸುತ್ತಾರೆ.

ತಾರೀಖು 10ನೇ ಡಿಸೆಂಬರ್ 1895.

ನಂ. 5364.—ಫೈ. 294.—ಗವರ್ಮೆಂಟಿನವರು ಆಜ್ಞಾಪಿಸುವದೇನಂದರೆ,—ಇದರಡಿ ಬರುವ ಜಾಸ್ತಿ ಅಂಶಗಳು ಮತ್ತು ಬದಲಾವಣಿಗಳು ಮೈಸೂರ್ ಸರ್ವಿಸ್ ರೆಗ್ಯುಲೇಷ್ನಗಳಲ್ಲಿ ದಾಖಲೆ ಮಾಡಲ್ಪಡತಕ್ಕದ್ದು.

I. 518ನೇ ಆರ್ಟಿಕಲ್‌ಗೆ ಬದಲಾಗಿ ಸೇರಿಸಲ್ಪಡತಕ್ಕದ್ದೇನಂದರೆ,—"ಆರ್ಟಿಕಲ್ 518 ಯೆ. ಕೌನ್ಸೆಲಿನ ಯಾವ ಮೆಂಬರಾದರೂ ರೈಲ್ ಮೇಲೆ 20 ಮೈಲಿಗಳಿಗೆ ಕಮ್ಮಿ ಯಿಲ್ಲದೆ ವಂದೇ ಪ್ರಯಾಣ ಮಾಡಬೇಕಾಗಿದ್ದ ಅಂಥಾ ಪ್ರಯಾಣದ ಆಖೈರಿನಲ್ಲಿ ಅವರ ಉಪಯೋಗಕ್ಕೋಸ್ಕರವಾಗಿ ಬೇಕಾದ ವಾಹನ ಸಾಧನಗಳನ್ನು ಕಳುಹಿಸಿದಾಗ ಅವರಿಗೆ 525, ಯೆ. ಆರ್ಟಿಕಲ್ ಅನುಸರಿಸಿ ಸಲ್ಲಬೇಕಾದ ಸಾಧಾರಣ ಅಲೊವೆನ್ಸ್ ದೆಖೀಲ್ ಅಂಥಾ ವಾಹನ ಸಾಧನವೆಂದರೆ ವಂದು ಗಾಡಿ ಯರಡು ಜೋಡಿ ಕುದರೆಗಳನ್ನು ಕಳುಹಿಸುವ ಬಗ್ಯಾಗಿ ತಗಲುವ ಕರಾರುವಾಕಾ ಲಾಗವಡು ಸುದಾ ಪಡಿಯುವ ಬಗ್ಯೆ ಅರ್ಹರಾಗಿರತಕ್ಕದ್ದು.

"518 ಬಿ. ಯಾವದಾದರೂ ವಬ್ಬ ಆಫಿಸರು, ಅವರ ಮೇಲ್ದರ್ಜೆ ಆಫಿಸರರ ಜನರಲ್ ಅಥವಾ ಸ್ಪೆಷಲ್ ಮಂಜೂರಾತಿಗೆ ವಳಪಟ್ಟು ರೈಲ್ ಮಾರ್ಗವಾಗಿ 20 ಮೈಲಿಗಳಿಗೆ ಕಮ್ಮಿ ಇಲ್ಲದೆ ವಂದೇ ಪ್ರಯಾಣ ಮಾಡಬೇಕಾಗಿದ್ದ ಅಂಥಾ ಪ್ರಯಾಣದ ಆಖೈರಿನಲ್ಲಿ ಅವರ ಉಪಯೋಗಕ್ಕೋಸ್ಕರವಾಗಿ ಬೇಕಾದ ವಾಹನ ಸಾಧನಗಳನ್ನು ಕಳುಹಿಸಿದಾಗ ಅವರಿಗೆ 522ನೇ ಆರ್ಟಿಕಲ್ ಅನುಸರಿಸಿ ಸಲ್ಲಬೇಕಾದ ಸಾಧಾರಣ ಅಲೊವೆನ್ಸ್ ದೆಖೀಲ್ ಅಂಥಾ ವಾಹನ ಸಾಧನವನ್ನು ಕಳುಹಿಸುವ ಬಗ್ಯಾಗಿ ತಗಲುವ ಕರಾರುವಾಕ ಲಾಗವಡು ಸುದಾ ಪಡಿಯುವ ಬಗ್ಯೆ ಅರ್ಹರಾಗಿರತಕ್ಕದ್ದು.

ಈ ಸಬ್ ಆರ್ಟಿಕಲ್‌ನಲ್ಲಿ "ವಾಹನ ಸಾಧನ" ಅಂದರೆ—

(1) ಡಿಸ್ಟ್ರಿಕ್ಟ್ ಜಡ್ಜಗಳು, ಡೆಪ್ಯುಟಿ ಕಮ್ಮಿಷನರಗಳು ಮತ್ತು ಎಗ್ಜಕ್ಯೂಟಿವ್ ಇಂಜನೀಯರ್‌ಗಳು ಅಥವಾ ರೆವಿನ್ಯೂ, ಜುಡಿಷಿಯಲ್ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗಳಲ್ಲಿ ಇವರುಗಳಿಗೆ ಮೇಲ್ಪಟ್ಟ, ದರ್ಜೆವುಳ್ಳ ಆಫಿಸರರು ಅಥವಾ ಯಾವದಾದರೂ ಇತರ ಗೊತ್ತಾದ ಆಫಿಸರ್‌ಗಳು, ಇವರುಗಳ ವಿಷಯದಲ್ಲಿ, ವಂದು ಗಾಡಿ ಯರಡು ಕುದರೆಗಳು ಯಂದು ಅನ್ವಯಿಸತಕ್ಕದ್ದು.

(2) ಇತರರ ವಿಷಯದಲ್ಲಿ, ವಂದು ಸವಾರಿ ಕುದರೆಯಂದು ಅನ್ವಯಿಸತಕ್ಕದ್ದು.

ಷರಾ 1.—ಮಾಹೆಯಾನಾ ಸರ್ಟಿಫಿಕೆಟ್ ಭತ್ಯೆವನ್ನು ಖಾಯಂ ಆಗಿ ಪಡಿಯುವ ಯಾವ ಆಫಿಸರಾಗಲಿ ಈ ಸಬ್ ಆರ್ಟಿಕಲಿನ ಪ್ರಯೋಜನಗಳಿಗೆ ಅರ್ಹರಾಗಿರುವದಿಲ್ಲವು.

ಷರಾ 2.—ಈ ಸಬ್ ಆರ್ಟಿಕಲ್ ಅನುಸರಿಸಿ ಮೇಲ್ ದರ್ಜೆ ಆಫಿಸರರ ಮಂಜೂರಾತಿಯು ಸರ್ಕಾರದ ಕೆಲಸಗಳ ಅನುಕೂಲ್ಯತೆಗಳಿಗೋಸ್ಕರವೇ ಕೊಡಲ್ಪಡತಕ್ಕದ್ದು, ಹಾಂಗೆ ಕೊಟ್ಟಾಗ ಕಾರಣಗಳ ಸವೇತವಾಗಿ ಗವರ್ಮೆಂಟಿಗೆ ಜನರಲ್ ಇಲಾಖೆಯಲ್ಲಿ ತಕ್ಷಣ ತಿಳಿಸಲ್ಪಡಬೇಕು."

II. 525 ಯೆ. ಆರ್ಟಿಕಲ್‌ಗೆ ಬದಲಾಗಿ ಸೇರಿಸಲ್ಪಡಬೇಕಾದ್ದೇನಂದರೆ:—

"525 ಯೆ. ಕೌನ್ಸಲ್ಲಿನ ವ್ಯೊಬ್ಬ ಮೆಂಬರು ರೈಲ್ ಮಾರ್ಗವಾಗಿ ಸರ್ಕಾರ್ ಕೆಲಸದ ಮೇಲೆ ಪ್ರಯಾಣ ಮಾಡಿದಾಗ ಅಂಥಾ ರೈಲ್ವೆ ಪ್ರಯಾಣಕ್ಕೋಸ್ಕರ ಅವರಿಗೆ ಸಲ್ಲಬೇಕಾದ್ದೇನಂದರೆ,—

(1) ಅವರಿಗೋಸ್ಕರ ಫಸ್ಟ್‌ಕ್ಲಾಸ್ ಭಂಡಿಯ ವಂದು ಕಂಪಾರ್ಟ್‌ಮೆಂಟ್;

(2) ಖಾಸ್ ನೌಕರರಿಗೋಸ್ಕರ ನಾಲ್ಕು ಥರ್ಡ್‌ಕ್ಲಾಸ್ ಚಾರ್ಜು; ಮತ್ತು

(3) ಖಾಸ್ ಸಾಮಾನಿಗೋಸ್ಕರ ಹತ್ತು ಮಣಕ್ಕೆ ಮಿಂರದ ತೇದಾದಿಗೆ ರೈಲ್ವೆ ಚಾರ್ಜು."

III. ಆರ್ಟಿಕಲ್ 528ರಲ್ಲಿನವಮೂರಾದ ಯರಡನೇ ನಂಬರ್ ಆರ್ಡರ್‌ಡಿಸ್ಸಿನಲ್ಲಿ ಸೇರಿಸಲ್ಪಡಬೇಕಾದ್ದೇನಂದರೆ—"ಕೌನ್ಸಲ್ ಮೆಂಬರುಗಳಿಗೆ—ಭತ್ತ ಹತ್ತು ರೂಪಾಯಿ, ಮೈಲಿಭತ್ತ—ಮೈಲಿ ವಂದಕ್ಕೆ ಯಂಟಾಣೆ."

IV. ಆರ್ಟಿಕಲ್ 552ಕ್ಕೆ ಸೇರಿಸಲ್ಪಡಬೇಕಾದ್ದೇನಂದರೆ—"ಷರಾ—ಈ ಆರ್ಟಿಕಲ್ ಕೌನ್ಸಿಲಿನ ಮೆಂಬರುಗಳಿಗೆ ಅನ್ವಯಿಸತಕ್ಕದ್ದಲ್ಲವು."

ತಾರೀಖು 14ನೇ ಡಿಸೆಂಬರ್ 1895.

ತಪ್ಪು ತಿದ್ದುವಿಕೆ.

ನಂ. 5584.—ಫಾ. ಫೈ. 36—95, 1895ನೇ ಇಸವಿ ಜೂನ್ 19ನೇ ಮುಕ್ತಂ 23538—ರೆ. 3437ನೇ ನಂಬರ ಗವರ್ಮೆಂಟ್ ಇನ್ಸ್ಟ್ರಾಕ್ಷನ್ ಪ್ರಕಾರ ಪ್ರಸಿದ್ಧಮಾಡಲ್ಪಟ್ಟ ಮೈಸೂರು ಗೆಜೆಟ್ಟಿನ 394ನೇ ಪುಟದಲ್ಲಿ ಛಾಪಿಸಲ್ಪಟ್ಟ ವುಂಬಳಿ ಬೈಲ್ ಸ್ಟೇಟ್ ಫಾರೆಸ್ಟಿಗೆ ಕೇರಿದ 17ನೇ ನಂಬರ್ ಚಿಕ್ಕರನಾಯಕಹಳ್ಳಿ ಬ್ಲಾಕಿನ ಚಕ್ಕು ಬಂದಿಗೆ ಬದಲಾಗಿ ಇದರಡಿ ಬರುವದನ್ನ ಕೇರಿಸತಕ್ಕದ್ದು:—

"ಉತ್ತರಕ್ಕೆ.—ತುಂಗಾನದಿಯ ಬಂದು ಶಾಖೆಯಾದ ಯಳೆಸಲು ಬಳಿಯಣ ಹಾಲ್‌ಲಕ್ಕು ವ್ಯೆದು 18ನೇ ಸರ್ವೇ ನಂಬರಿನಿಂದ ಬಂದು ಸಾಫ ಮಾಡಿದ ಲೈನು ಹೊರಟು ಶಿವಮೊಗ್ಗಾ ಯಡೆಹಳ್ಳಿರಸ್ತೆಯ 7ನೇ ಮೈಲಿ 5ನೇ ಫರ್‌ಲಾಂಗ್ ವರಿಗೆ ಹೋಗುತ್ತದೆ."

"ಪೂರ್ವಕ್ಕೆ.—ವೇಲಿನ ಪಾಯಂಟಿನಿಂದ ಸದರೀ ಲೈನ್ ಶಿವಮೊಗ್ಗಾ ಯಡೆಹಳ್ಳಿ ಮಾರ್ಗವಾಗಿ ಹೊರಟು 10ನೇ ಮೈಲಿ 5ನೇ ಫರ್‌ಲಾಂಗ್ ವರಿಗೆ ಹೋಗುತ್ತದೆ.

"ದಕ್ಷಿಣಕ್ಕೆ.—ಬಂದು ಸಾಫ ಮಾಡಿದ ಲೈನ್ ಶಿವಮೊಗ್ಗಾ ಯಡೆಹಳ್ಳಿ ರಸ್ತೆಯ 10ನೇ ಮೈಲಿ 5ನೇ ಫರ್‌ಲಾಂಗಿನಿಂದ ಹೊರಟು ಸಮುದ್ರಹಳ್ಳಿಯ 59ನೇ ಸರ್ವೇ ನಂಬರ್‌ವರಿಗೆ ಹೋಗುತ್ತದೆ.

"ಪಶ್ಚಿಮಕ್ಕೆ.—ಸದರೀ 59ನೇ ಸರ್ವೇ ನಂಬರಿನಿಂದ ಲೈನ್ ಹೊರಟು ಪುರುನಾದ ಸ್ಥಳಕ್ಕೆ ಬಂದು ಕೇರುತ್ತದೆ."

58

ತಾರೀಖು 18ನೇ ಡಿಸೆಂಬರ್ 1895.

ಕ್ಯಾಂಪ್ ನಂ. 46.—ರೆ.—ಮೈಸೂರು ಸರ್ವಿಸ್ ರೆಗ್ಯುಲೇರ್ಷಗಳ 172ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಯಂ. ಚಂಗವ್ಯಶೆಟ್ಟಿ ಬಿ. ಎ. ಯವರು, 1895ನೇ ಇಸವಿ ಡಿಸೆಂಬರ್ 19ನೇ ತಾರೀಖು ಲಾಗಾಯ್ತು ಯಾ ಅವರು ಉಪಯೋಗಿಸಿಕೊಳ್ಳುವೆ ತಾರೀಖು ಮೊದಲು ಹನ್ನೆರಡು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 50.—ರೆ.—ಗುಂಡ್ಲುಪೇಟೆ ತಾಲ್ಲೂಕು ಕಸಬಾ ಹೋಬಳಿಗೆ ಹಾಲಿ ಕೇರಿರುವೆ ಇದರಡಿ ಕಂಡ ಗ್ರಾಮಗಳು ಅದೇ ತಾಲ್ಲೂಕು ಕೆಲಸೂರು ಹೋಬಳಿಗೆ ವರ್ಗ ಮಾಡಲ್ಪಟ್ಟಿರುತ್ತೆ:—

1. ಹಳ್ಳದಪುರ
2. ಕಲ್ಲಪಳ್ಳಿ
3. ಕಬ್ಬಹಳ್ಳಿ
4. ಸಂಪಿಗೇಪುರ
5. ಪಡಗೂರು

ತಾರೀಖು 21ನೇ ಡಿಸೆಂಬರ್ 1895.

ನಂ. 5706.—ಫಾ. ಫೈ. 90—95.—ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಡೆಪ್ಯುಟಿ ಕ್ವರ್ಸರ್‌ವೇಟರ್ ಮೆಸ್ಸರ್ ಟಿ. ಅಬ್ದುಲ್ ಕರೀಂಯವರಿಗೆ, 1895ನೇ ಇಸವಿ ಅಕ್ಟೋಬರ್ 27ನೇ ಮಧ್ಯಂ. 4055.—ಫಾ. 241ನೇ ನಂಬರ್ ಇನ್ಸ್ತ್ರಾರ್ನಾಮೆಯಿಂದ ಕೊಡಲ್ಪಟ್ಟ ಬಂದು ತಿಂಗಳು ಇಪ್ಪತ್ತು ದಿವಸಗಳ ಪ್ರಿವಿಲೀಜ್ ರಜಾವನ್ನ ಅವರು 1895ನೇ ಇಸವಿ ನವಂಬರ್ 8ನೇ ಮಧ್ಯಂ. ಲಗಾಯ್ತು ಅದೇ ಇಸವಿ ಡಿಸೆಂಬರ್ 4ನೇ ಮಧ್ಯಂ. ಪರಿಯಂತ ಅಂದರೆ 27 ದಿವಸಗಳು ಮಾತ್ರ ಉಪಯೋಗಿಸಿಕೊಂಡಿರುತ್ತಾರಾಗಿ ಉಳಿದ ಭಾಗ ಅಂದರೆ 23 ದಿವಸಗಳ ರಜಾ ಇದರ ದೆಸೆಯಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 23ನೇ ಡಿಸೆಂಬರ್ 1895.

ನಂ. 5768.—ರೆ. 2256.—ಶಿವಮೊಗ್ಗ ತಾಲ್ಲೂಕು ಅಮಲ್ದಾರ್ ಪಿ. ನಂಜುಂಡನಾಯಿಡುಯವರಿಗೆ, 1895ನೇ ಇಸವಿ ಅಕ್ಟೋಬರ್ 25ನೇ ಮಧ್ಯಂ. 4065.—ರೆ. 1570ನೇ ನಂಬರ್ ಗವರ್ನಮೆಂಟ್ ಇನ್ಸ್ತ್ರಾರ್ ನಾಮೆಯಿಂದ ಕೊಡಲ್ಪಟ್ಟ 40 ದಿವಸಗಳ ಪ್ರಿವಿಲೀಜ್ ರಜಾವನ್ನ, ಅವರು 1895ನೇ ಇಸವಿ ನವಂಬರ್ 8ನೇ ಮಧ್ಯಾನ್ನದಿಂದ ಮುಂದಿನ ಮಧ್ಯಾನ್ನಾತ್ಪರದಾರಭ್ಯ ಉಪಯೋಗಿಸಿಕ್ಕೊಂಡು ಅದೇ ಇಸವಿ ಡಿಸೆಂಬರ್ 9ನೇ ಮಧ್ಯಮಿನ ಮಧ್ಯಾನ್ನಾತ್ಪರ ಕೆಲಸದಮೇಲೆ ಹಾಜರಾಗಿರುತ್ತಾರಾಗಿ ಅವರಿಗೆ ಕೊಡಲ್ಪಟ್ಟ ರಜಾ ಪೈಕಿ ಉಳಿದಭಾಗ ಅಂದರೆ 9 ದಿವಸಗಳ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 28ನೇ ಡಿಸೆಂಬರ್ 1895.

ನಂ. 5736.—ರೆ. 2235.—ಫೆನವನ್ನು ಹೊಂದಿದ ಶ್ರೀಮಂ. ಮಹಾರಾಣಿ ರೀಜಂಟರವರು, ಮೆಸ್ಸರ್ ಯಂ. ಶಾಮರಾವ್ ಯಂ. ಎ. ಯವರನ್ನೂ ಮತ್ತು ಮೆಸ್ಸರ್ ಅಂಬಳಿ ಸುಬ್ರಹ್ಮಣ್ಣಯ್ಯ ಬಿ. ಎ. ಯವರನ್ನೂ, ಸುದಾ ಬಿ. ಪೆಡ್ಯೂಲಿನ ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರಾಗಿ ಮೊಕರರ್ರಾಮಿಡಿರುತ್ತಾರೆ.

ತಾರೀಖು 29ನೇ ಡಿಸೆಂಬರ್ 1895.

ನಂ. 5741.—ಫಾ. 380.—ಮೈಸೂರು ಸರ್ವಿಸ್ ರೆಗ್ಯುಲೇರ್ಷಗಳ 221ನೇ ಆರ್ಟಿಕಲ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಡೆಪ್ಯುಟಿ ಕ್ವರ್ಸರ್‌ವೇಟರ್ ಮೆಸ್ಸರ್ ಸಿ. ಇ. ಯಂ. ರಸ್ಸಲ್ ಯವರಿಗೆ, 1896ನೇ ಇಸವಿ ಜನವರಿ 16ನೇ ತಾರೀಖು ಲಾಗಾಯ್ತು ಯಾ ಅವರು ಅದನ್ನು ಉಪಯೋಗಿಸಿಕೊಂಡ ತಾರೀಖು ಮೊದಲು ಬಗರ್ ತಲಬ್ ಒಂದು ವರುಷದ ವಿಶೇಷ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 4ನೇ ಜನವರಿ 1896.

ನಂ. 5779.—ರೆ. 2263.—ಮೈಸೂರ್ ಸರ್ವಿಸ್ ರೆಗ್ಯುಲೇರ್ಷಗಳ 172ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ್‌ನ ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರಾಗಿರುವ ಮೆಸ್ಸರ್ ಯಂ. ನಾರಾಯಣರಾಯರು ಮೂಹೆ ಮಜಕೂರ್ 6ನೇ ತಾರೀಖು ಲಾಗಾಯ್ತು ಯಾ ಅವರು ಅದನ್ನು ಉಪಯೋಗಿಸಿಕೊಂಡ ತಾರೀಖು ಮೊದಲು 4 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ಮೆಸ್ಸರ್ ಯಂ. ನಾರಾಯಣರಾಯರವರು ರಜಾದಮೇಲೆ ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಆ ಸದರೀ ಡಿಸ್ಟ್ರಿಕ್ಟಿನ ಸೀನಿಯರ್ ಅಸಿಸ್ಟೆಂಟ್ ಕಮ್ಮಿಷನರವರು ಡಿಸ್ಟ್ರಿಕ್ಟ್ ಚಾರ್ಜನ್ನು ವಹಿಸಿ ಯಿರಬೇಕಾದ್ದು.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್,
ರೆವಿನ್ಯೂ ಸೆಕ್ರಟೆರಿ.